**OS.No.**14/2018 **DW**-1

**ದಿನಾಂಕಃ 06.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಆರ್.ಡಿ.ಆರ್. ವಕೀಲರಿಂದಃ-**

ನಾನು ಹಾಜರುಪಡಿಸಿದ ನಿ.ಡಿ. 1 ಕೆ ವಿ ಶಂಭುಲಿಂಗ ಹಾಗೂ ಕೆ ವಿ ಮಂಜುನಾಥ್ ರವರಿಗೆ ಜಂಟಿಯಾಗಿ ಮಾಡಿಕೊಟ್ಟ ಜಿ.ಪಿ.ಎ. ಎಂದರೆ ಹೌದು. ನನ್ನ ಸ್ವಾಧೀನ ಅನುಭವದಲ್ಲಿರುವ ನನಗೆ ಸ್ವಯಾರ್ಜಿತವಾದ ನನ್ನ ಸಂಪೂರ್ಣ ಹಕ್ಕು ಬಾಧ್ಯತೆಗೆ ಒಳಪಟ್ಟಿರುವ ಮೇಲ್ಕಂಡ ಎರಡೂ ಐಟಂಗಳ ಜಮೀನುಗಳ ಬಾಬ್ತು ಜಿ.ಪಿ.ಎ. ಬರೆದುಕೊಟ್ಟಿದ್ದೇನೆ ಎಂದು ನಿ.ಡಿ. 1 ರ ಪುಟ ಸಂಖ್ಯೆ 1 ರ ಕೊನೆಯ ಮೂರು ಸಾಲುಗಳಲ್ಲಿ ಉಲ್ಲೇಖಿಸಲಾಗಿದೆ ಎಂದರೆ ಹೌದು. ಅದೇ ರೀತಿ ನಿ.ಡಿ.1 ರ 3ನೇ ಪುಟದ 2ನೇ ಸಾಲಿಲ್ಲಿ ಭಾರತ್ ಯೂನಿವರ್ಸಲ್ ಶಿಕ್ಷಕರ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ, ಆಟದ ಮೈದಾನ ಅಥವಾ ಕಾಲೇಜಿನ ಹಿತದಷ್ಟಿಯಿಂದ ಅಭಿವೃದ್ದಿ ಕಾರ್ಯ ನಡೆಸಲು ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದರೆ ಹೌದು. ಸ.ನಂ. 43/1 ರಲ್ಲಿ 10 ಗುಂಟೆ 43/2 ರಲ್ಲಿ 1 ಎಕರೆ ಒಟ್ಟು 1 ಎಕರೆ 10 ಗುಂಟೆ ಸಂಬಂಧಪಟ್ಟಂತೆ ನಿ.ಡಿ. 1 ಅನ್ನು ಬರೆದುಕೊಡಲಾಗಿದೆ ಎಂದರೆ ಹೌದು. ಸದರಿ 1 ಎಕರೆ 10 ಗುಂಟೆ ಪೂರ್ವಕ್ಕೆ ಭಾರತ್ ಯೂವನಿರ್ಸಲ್ ಶಿಕ್ಷಕರ ತರಬೇತಿ ಕೇಂದ್ರದ ಕಟ್ಟಡ ಮತ್ತು ಆಟದ ಮೈದಾನ ಎಂದು ನಿ.ಡಿ.1ರ ಶೆಡ್ಯೂಲ್ ನಲ್ಲಿ ತೋರಿಸಲಾಗಿದೆ ಎಂದರೆ ಹೌದು. ನಿ.ಡಿ.1 ಅನ್ನು ಬರೆದುಕೊಡುವ ಸಮಯದಲ್ಲಿ ಭಾರತ್ ಯೂವನಿರ್ಸಲ್ ಶಿಕ್ಷಕರ ತರಬೇತಿ ಕೇಂದ್ರದ ಕಟ್ಟಡ ಮತ್ತು ಆಟದ ಮೈದಾನ ನಿರ್ಮಾಣವಾಗಿತ್ತು ಎಂದರೆ ಹೌದು.

ನಿ. ಡಿ 2 ವಿಶೇಷ ಮುಕ್ತಿಯಾರ್ ಪತ್ರವನ್ನು ಕೇವಲ ಕೆ ವಿ ಮಂಜುನಾಥ್ ರವರಿಗೆ ಮಾತ್ರ ಕೊಟ್ಟಿದ್ದಾರೆ ಎಂದರೆ ಹೌದು. ಕೆ ವಿ ಶಂಭುಲಿಂಗಪ್ಪರವರಿಗೆ ವಿಶೇಷ ಮುಕ್ತಿಯಾರ್ ಪತ್ರವನ್ನು ಕೊಟ್ಟಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ರೇಣುಕಾರಾಧ್ಯರವರಿಂದ ಕೆ.ವಿ. ಶಂಭುಲಿಂಗಪ್ಪ ರವರೇ ನಿಡಿ.2 ಅನ್ನು ಕೆ ವಿ ಮಂಜುನಾಥ್ ರವರಿಗೆ ಬರೆಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಕೆ ವಿ ಶಂಭುಲಿಂಗಪ್ಪರವರು ನಿಡಿ 2 ಅನ್ನು ಬರೆಸಿದ್ದರು ಎನ್ನುವ ಬಗ್ಗೆ ಅದರಲ್ಲಿ ಯಾವುದೇ ಹಿಂಬರಹ ಇಲ್ಲ ಎಂದರೆ ಹೌದು. ನಿಡಿ 2 ರ ಮಾಡುವ ಸಮಯದಲ್ಲಿ ಕೆ ವಿ ಶಂಭುಲಿಂಗಪ್ಪರವರು ಹಾಜರಿದ್ದರು ಎನ್ನುವ ಬಗ್ಗೆ ಅದರಲ್ಲಿ ಕೆ ವಿ ಶಂಭುಲಿಂಗಪ್ಪ ರವರ ಸಹಿ ಇದೆಯಾ ಎಂದರೆ ಸಾಕ್ಷಿ ಸಹಿ ಇಲ್ಲ ಎಂದು ನುಡಿಯುತ್ತಾರೆ. ಸ.ನಂ.43/2 ರಲ್ಲಿಯ 36 ಗುಂಟೆ ಸಂಬಂಧಿಸಿದಂತೆ ನಿಡಿ 2 ಅನ್ನು ಮಾಡಿಕೊಡಲಾಗಿದೆ ಎಂದರೆ ಹೌದು. ನಿಡಿ 2 ರಲ್ಲಿಯ ಚೆಕ್ಕುಬಂದಿಯಲ್ಲಿ ಸದರಿ 36 ಗುಂಟೆ ಆಸ್ತಿಯ ಪೂರ್ವಕ್ಕೆ ಸರ್ಕಾರಿ ರಸ್ತೆ ಹಾಗೂ ಪಶ್ಚಿಮಕ್ಕೆ ರೇಣುಕಾರಾಧ್ಯರವರ ಉಳಿಕೆ ಆಸ್ತಿ ಇದೆ ಎಂದು ಬರೆಯಾಲಗಿದೆ ಎಂದರೆ ಹೌದು.

1998-99ನೇ ಸಾಲಿನ ನಿಡಿ 4 ರ ಕಾರ್ಯಕಾರಿಣಿ ಸಮಿತಿಯಲ್ಲಿ ರೇಣುಕಾರಾಧ್ಯರವರು ಕೇವಲ ಸದಸ್ಯರಾಗಿದ್ದರು ಎಂದರೆ ಹೌದು. ನಿಡಿ 4 ಕಾರ್ಯಕಾರಿಣಿ ಸಮಿತಿಯು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಅಸ್ತಿತ್ವದಲ್ಲಿತ್ತು ಎಂದರೆ ಸಾಕ್ಷಿ ಸದರಿ ದಾಖಲಾತಿಯನ್ನು ಪರಿಶೀಲಿಸಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ 1999-2000 ನೇ ಸಾಲಿನ ಕಾರ್ಯಕಾರಿಣಿ ಸಮಿತಿಯಲ್ಲಿ ರೇಣುಕಾರಾಧ್ಯರವರು ಕೇವಲ ಸದಸ್ಯರಾಗಿದ್ದರು ಎಂದರೆ ಹೌದು.

ನಿಡಿ 6 ರ ಕಾರ್ಯಕಾರಿಣಿ ಸಮಿತಿಯು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಅಸ್ತಿತ್ವದಲ್ಲಿತ್ತು ಎಂದರೆ ಸಾಕ್ಷಿ ದಿನಾಂಕಃ 30.05.1999 ರಿಂದ 2000ನೇ ಇಸವಿಯವರೆಗೆ ಇತ್ತು ಆದರೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು 2001ನೇ ಸಾಲಿನಲ್ಲಿ ಕಾರ್ಯಕಾರಿಣಿ ಸಮಿತಿಗೆ ಸೇರಿರುತ್ತೇನೆ. ವಾದಿ ನಂ1 ರವರು 2006 ರಲ್ಲಿ ಕಾರ್ಯಕಾರಿಣಿ ಸಮಿತಿಗೆ ಸೇರಿರುತ್ತಾರೆ. ನಿಡಿ 10ರ ಪ್ರಕಾರ ನಾನು ಮತ್ತು ವಾದಿ ನಂ.1 ರವರು ಮೊದಲ ಬಾರಿ 2009-2010ನೇ ಸಾಲಿನಲ್ಲಿ ಕಾರ್ಯಕಾರಿಣಿ ಸಮಿತಿಗೆ ಸದಸ್ಯರಾಗಿ ಸೇರ್ಪಡೆಯಾಗಿರುತ್ತೇವೆ ಎಂದರೆ ಹೌದು. ನಿಡಿ 10 ರ ಸಮಿತಿಯು ದಿಃ 06.09.2009 ರಿಂದ 2010ರವರಗೆ ಅಸ್ತಿತ್ವದಲ್ಲಿತ್ತು, ಯಾವ ತಿಂಗಳು ಎಂದು ಗೊತ್ತಿಲ್ಲ. ನಾನು 2009 ರಿಂದ 2013-14 ರವರಗೆ ಕಾರ್ಯಕಾರಿಣಿ ಸಮಿತಿಯಲ್ಲಿ ಸದಸ್ಯರಾಗಿ ಇದ್ದೆ. ವಾದಿ ನಂ.1 ರವರು 2013 ರವರಗೂ ಕಾರ್ಯಕಾರಿಣಿ ಸಮಿತಿಯಲ್ಲಿ ಸದಸ್ಯರಾಗಿದ್ದರು. ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯ ನೊಂದಾಯಿತ ಕಚೇರಿ ಬೆಂಗಳೂರಿನಲ್ಲಿದೆ.

ನಿಡಿ 24 ಅನ್ನು ಯಾವ ಉದ್ದೇಶಕ್ಕಾಗಿ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ಡಿ.ಎಡ್ ಸೀಟುಗಳನ್ನು ಹೆಚ್ಚುವರಿಯಾಗಿ ತೆಗೆದುಕೊಳ್ಳುವ ಉದ್ದೇಶದಿಂದ ಎನ್ ಸಿ ಟಿ ಗೆ ಹಾಜರುಪಡಿಸುವ ಸಲುವಾಗಿ ಮಾಡಿಸಿದ್ದೆವು ಎಂದು ನುಡಿಯುತ್ತಾರೆ. ನಿಡಿ 24 ಅನ್ನು ಯಾವ ದಿನಾಂಕದಂದು ಮಾಡಿಸಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ನಿಡಿ 24 ರಲ್ಲಿ ದಿನಾಂಕಃ 10.07.2009 ಎಂದು ತೋರಿಸಲಾಗಿದೆ ಎಂದರೆ ಹೌದು. ನಿಡಿ 24 ರಲ್ಲಿ ಸ.ನಂ.43/2 ಎಂದು ನಮೂದಿಸಲಾಗಿದೆ

ಎಂದರೆ ಹೌದು. ನಿಡಿ 26 ರಲ್ಲಿ ಕಾನೂನು ಅರಿವು ನೆರವು ಸಮಿತಿಯ ಬಗ್ಗೆ ಉಲ್ಲೇಖವಿದ್ದು, ಹಾಗಾದರೆ ಕಾನೂನು ಅರಿವು ನೆರವು ಸಮಿತಿಯವರು ನಮ್ಮ ಸಂಸ್ಥೆಗೆ ಕೊಟ್ಟ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ 29 ರಲ್ಲಿ ಖಾತಾ ನಂಬರ್ ಆಗಲೀ ಅಥವಾ ವಿಸ್ತೀರ್ಣವಾಗಲೀ ನಮೂದಿಲ್ಲ ಎಂದರೆ ಹೌದು. ನಿಡಿ 31 ಕ್ಕೆ ಶುಂಭುಲಿಂಗಪ್ಪರವರು ಉತ್ತರಕೊಟ್ಟಿರುತ್ತಾರೆ. ನಿಡಿ 31 ಕ್ಕೆ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಉತ್ತರ ಕೊಟ್ಟಿರುತ್ತಾರೆ. ಉತ್ತರದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಡಿ 32 ರ 3ನೇ ಪ್ಯಾರಾದಲ್ಲಿ 2 ಎಕರೆ 10 ಗುಂಟೆಯ ಪೈಕಿ 4 ಗುಂಟೆ ಕಟ್ಟಡವನ್ನು ಹೊರತುಪಡಿಸಿ ಎಂದು ಉಲ್ಲೇಖವಿದೆ ಎಂದರೆಹೌದು. ನಿಡಿ 32 ರಲ್ಲಿ ಹೆಚ್ ಬಿ ಬಸವರಾಜಯ್ಯರವರು ಬೆಂಕಿ ಹಚ್ಚಿದ್ದರು ಎಂದು ಉಲ್ಲೇಖಿಸಿದ್ದು, ಅ ಬಗ್ಗೆ ಶಂಭುಲಿಂಗಪ್ಪರವರು ಸದರಿ ಬಸವರಾಜಯ್ಯರವರ ವಿರುದ್ಧ ದೂರನ್ನು ಏನಾದರೂ ಕೊಟ್ಟಿದ್ದಾರಾ ಎಂದರೆ ಸಾಕ್ಷಿಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಬಸವರಾಜಯ್ಯರವರ ಮೇಲೆ ದೂರು ಕೊಟ್ಟ ಬಗ್ಗೆ ಅಥವಾ ಅವರ ಮೇಲೆ ಕಾನೂನು ಕ್ರಮ ಜರುಗಿಸಿದ್ದರ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಒಂದು ವೇಳೆ ಶಂಭುಲಿಂಗಪ್ಪರವರು ಬಸವರಾಜಯ್ಯರವರ ವಿರುದ್ಧ ದೂರು ಕೊಟ್ಟ ಬಗ್ಗೆ ಹಾಗೂ ಕಾನೂನಿನ ಕ್ರಮ ತೆಗೆದುಕೊಂಡ ಬಗ್ಗೆ ದಾಖಲಾತಿಗಳು ಇದ್ದಲ್ಲಿ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ 32 ಕ್ಕೆ ಸಂಬಂಧಿಸಿದಂತೆ ವಲಯ ಅರಣ್ಯಾಧಿಕಾರಿಗಳು ನೀಡಿದ ಉತ್ತರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ಹಾಸನದ ಸೆಷನ್ಸ್ ನ್ಯಾಯಾಲಯದಲ್ಲಿ ಆದೇಶವಾಗಿದೆ ಎಂದು ನಿಡಿ 32 ರಲ್ಲಿ ಉಲ್ಲೆಖವಿದ್ದು, ಆದೇಶವನ್ನು ನೀವೆನಾದಾರೂ ಓದಿ ನೋಡಿರುತ್ತೀರಾ ಎಂದರೆ ಸಾಕ್ಷಿ ಓದಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಹಾಗಾದರೆ ಕೇಸ್ ನಂಬರ್ ಯಾವುದು ಎಂದರೆ ಸಾಕ್ಷಿ ಕೇಸ್ ನಂಬರ್ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಅದೇಶವನ್ನು ಓದದೇ ಇದ್ದರೂ ಸಹಾ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಶಂಭುಲಿಂಗಪ್ಪರವರು  ಅನಧಿಕೃತವಾಗಿ ಮರಗಳನ್ನು ಕಡಿದಿದ್ದಾರೆ ಎಂದು ನಾಗರತ್ನಮ್ಮ ರವರು ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಹೌದು. ಸಾಕ್ಷಿ ಮುಂದುವರೆದು ಸಂಸ್ಥೆಯ ಆಸ್ತಿಯಲ್ಲಿಯ ಮರಗಳು ಮಕ್ಕಳ ಮೇಲೆ ಬೀಳುತ್ತವೆ ಎಂದು  ಶಂಭುಲಿಂಗಪ್ಪರವರು ಕಡಿಸಿದ್ದರು, ಅದರೆ ಸಂಸ್ಥೆಯ ಅಸ್ತಿ ನಮ್ಮ ಆಸ್ತಿ ಎಂದು ದೂರು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಪೊಲೀಸರು ಯಾವುದೇ ಕ್ರಮ ಜರುಗಿಸದೇ ಇದುದ್ದರಿಂದ ಇದೇ ನ್ಯಾಯಾಲಯದ ಮುಂದೆ ನಾಗರತ್ನರವರು ಶಂಭುಲಿಂಗಪ್ಪ ಹಾಗೂ ಪಾಲ್ ಕೂಗೇರ್ ರವರ ವಿರುದ್ಧ ಇದೇ ನ್ಯಾಯಾಲಯದ ಮುಂದೆ ಖಾಸಗಿ ದೂರು ಸಲ್ಲಿಸಿದ್ದರು ಎಂದರೆ ಸಾಕ್ಷಿ ಸಲ್ಲಿಸಿದ್ದರು ಅದರೆ ಅದು ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಗಂಡ ತೀರಿಕೊಂಡಿದ್ದರಿಂದ 2ನೇ ಪ್ರತಿವಾದಿಯ ವಿರುದ್ಧ ಸಿ.ಸಿ. ಪ್ರಕರಣ ದಾಖಲಾಗಿದೆ ಎಂದರೆ ಗೊತ್ತಿಲ್ಲ. ಪಿ ಸಿ ಆರ್  ದಾಖಲಿಸಿದ್ದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಶಂಭುಲಿಂಗಪ್ಪರವರು ವಲಯ ಅರಣ್ಯಾಧಿಕಾರಿಗಳಿಗೆ ನಿಡಿ 34 ಸುಳ್ಳು ಅರ್ಜಿ ಕೊಟ್ಟಿದ್ದರು ಎಂದರೆ ಸರಿಯಲ್ಲ.

ಎಸ್ ಬಿ ಐ ನಲ್ಲಿ ಯಾವ ಉದ್ದೇಶಕ್ಕಾಗಿ ಪಡೆದ ಸಾಲಕ್ಕಾಗಿ ನಿಡಿ 36 ರ ಸೀಜರ್ ನೋಟಿಸ್ ಬಂದಿತ್ತು ಎಂದರೆ ಸಾಕ್ಷಿ ಹಾಸ್ಟೆಲ್ ಕಟ್ಟಲು 25 ಲಕ್ಷ ಸಾಲ ಪಡೆದಿದ್ದು, ಕಟ್ಟದೇ ಇದುದ್ದಕ್ಕೆ ನೋಟಿಸು ಬಂದಿತ್ತು ಎಂದು ನುಡಿಯುತ್ತಾರೆ. ಹಾಸ್ಟೆಲ್ ಕಟ್ಟುವ ಉದ್ದೇಶವನ್ನು ಹೊರತುಪಡಿಸಿ ಬೇರೆ ಉದ್ದೇಶಕ್ಕಾಗಿ ಸಾಲ ಪಡೆದಿರುವುದಿಲ್ಲ. ಬಸ್ ಪಡೆಯಲು ಸಂಸ್ಥೆಯ ಪರವಾಗಿ ಸಾಲ ಪಡೆದಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬಸ್ ಪಡೆಯಲು 2010ನೇ ಇಸವಿಯಲ್ಲಿ 25 ಲಕ್ಷ ಸಾಲ ಪಡೆದಿದ್ದರು. ಬಸ್ ಪಡೆಯಲು ಪಡೆದ ಸಾಲವನ್ನು ತೀರಿಸದೇ ಇದುದ್ದರಿಂದ ನಿಡಿ 36 ಸೀಜರ್ ನೋಟಿಸನ್ನು ಬ್ಯಾಂಕಿನವರು ಕಳುಹಿಸಿದ್ದರು ಎಂದರೆ ಹೌದು. ಬಸ್ ಪಡೆಯಲು ಸಾಲ, ಹಾಸ್ಟೆಲ್ ಕಟ್ಟಲು ಪಡೆದ ಸಾಲವನ್ನು ಹೊರತುಪಡಿಸಿ ಶಂಭುಲಿಂಗಪ್ಪರವರು ಇನ್ನು ಎರಡು ಉದ್ದೇಶಕ್ಕಾಗಿ ಸಾಲವನ್ನು ಪಡೆದಿದ್ದರು ಎಂದರೆ ಹೌದು. ಆ ಎರಡೂ ಸಾಲಗಳನ್ನು ಯಾವ ಉದ್ದೇಶ್ಕಾಗಿ ಪಡೆದಿದ್ದರು ಎಂದರೆ ಸಾಕ್ಷಿ ಹಾಸ್ಟೆಲ್ ಕಟ್ಟುವ ಉದ್ದೇಶಕ್ಕಾಗಿ ಪಡೆದಿದ್ದರು ಎಂದು ನುಡಿಯುತ್ತಾರೆ. ಆ ಎರಡೂ ಸಾಲಗಳನ್ನು ಹಾಸ್ಟೆಲ್ ಕಟ್ಟುವ ಉದ್ದೇಶಕ್ಕಾಗಿ ಅಲ್ಲ, ಒಂದನ್ನು ಸ್ವಂತಕ್ಕಾಗಿ ಹಾಗೂ ಇನ್ನೊಂದನ್ನು ವ್ಯವಸಾಯಕ್ಕಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಸಾಲವನ್ನು ಶಂಭುಲಿಂಗಪ್ಪರವರು ಹಾಸ್ಟೆಲ್ ಗಾಗಿ, ಬಸ್ ಖರೀದಿಗಾಗಿ ಹಾಗೂ ಶಾಲೆಯ ಅಭಿವೃದ್ದಿಗಾಗಿ ಪಡೆದಿದ್ದರು ಎಂದು ನುಡಿಯುತ್ತಾರೆ.

ನಿಡಿ 42 ರ ದಾಖಲಾತಿ ಯಾವುದು ಎಂದರೆ ಸಾಕ್ಷಿ ಕೆ ವಿ ಮಂಜುನಾಥ್ ರವರು ರಸ್ತೆ ಅಪಘಾತದಲ್ಲಿ ತೀರಿಕೊಂಡ ನಂತರ ವಾದಿ ನಂ.1 ರವರು ಸಂಸ್ಥೆಗೆ ಅರ್ಜಿ ಕೊಟ್ಟಿದ್ದು, ಆ

ರೀತಿ ಮಾಡಲು ಬರುವುದಿಲ್ಲವೆಂದು ಕಾರ್ಯಕಾರಿಣಿ ಸಮಿತಿಯಲ್ಲಿ ತೀರ್ಮಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 42 ರ ಆದೇಶದ ವಿರುದ್ಧ ವಾದಿ ನಂ.1 ರವರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಹೌದು. ಪಿ ಡಿ ಓ ರವರು ಮಾಡಿದ ಆದೇಶವನ್ನು ರದ್ದುಗೊಳಿಸಿರುತ್ತಾರೆ ಎಂದರೆ ಹೌದು. ಕಾರ್ಯದರ್ಶಿಯವರ ಹೆಸರಿಗೆ ಖಾತೆ ಮಾಡಿ ಎಂದು ನಿಡಿ 44 ರಲ್ಲಿ ಯಾವುದೇ ಉಲ್ಲೇಖವಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ, ಅದರೆ ಸಂಸ್ಥೆಯ ಆಸ್ತಿಯಾಗಿದ್ದರಿಂದ ಸಂಸ್ಥೆಯನ್ನು ಉಳಿಸಿಕೊಳ್ಳುವ ಸಲುವಾಗಿ ಕಾರ್ಯಕಾರಿಣಿ ಸಮಿತಿಯ ತೀರ್ಮಾನದಂತೆ ಆಸ್ತಿಯನ್ನು ಕಾರ್ಯದರ್ಶಿಯವರ ಹೆಸರಿಗೆ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಕಾರ್ಯದರ್ಶಿಯವರ ಹೆಸರಿಗೆ ಖಾತೆ ಮಾಡಿ ಎಂದು ನಿಡಿ 44 ರಲ್ಲಿ ಯಾವುದೇ ಉಲ್ಲೇಖ ಇರದೇ ಇದ್ದರೂ ಸಹಿತ ಶಂಭುಲಿಂಗಪ್ಪರವರು ರಾಜಕೀಯ ಪ್ರಭಾವ ಬೀರಿ ಪಿ ಡಿ ಓ ರವರನ್ನು ಷರೀಕ್ ಮಾಡಿಕೊಂಡು ಕಾರ್ಯದರ್ಶಿಯವರ ಹೆಸರಿಗೆ ಖಾತೆ ಮಾಡಿಸಿದ್ದರು ಎಂದರೆ ಸರಿಯಲ್ಲ.

ನಿಡಿ 47 ಅನ್ನು 1998ನೇ ಇಸವಿಯಲ್ಲಿ ಮಾಡಿಸಿರುತ್ತಾರೆ. ನಿಡಿ 47 ರಂತೆಯೇ ಕಟ್ಟಡ ನಿರ್ಮಾಣವಾಗಿದೆಯಾ ಎಂದರೆ ಸಾಕ್ಷಿ ಹೌದು, ಆಗಿದೆ ಎಂದು ನುಡಿಯುತ್ತಾರೆ. ನಿಡಿ 47ರ ಪ್ರಕರಣ ಕಟ್ಟಡ ನಿರ್ಮಿಸಲು ಲೈಸೆನ್ಸ್ ಪಡೆದಿದ್ದರು. ಲೈಸೆನ್ಸ್ ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಲೈಸೆನ್ಸ್ ಮತ್ತು ಪ್ಲಾನ್ ಅನ್ನು ನೀಡುವ ಅಧಿಕಾರ ಪಿಡಿಓ ರವರಿಗೆ ಮಾತ್ರ ಇದೆ ಎಂದರೆ ಹೌದು. ನಿಡಿ 47 ರಲ್ಲಿ ಪಿಡಿಒ ರವರ ಸೀಲು

ಮತ್ತು ಸಹಿ ಇಲ್ಲ ಎಂದರೆ ಸಾಕ್ಷಿ ಹೌದು ಇಲ್ಲ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸಹಿ ಇದೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು ರಾಜಕೀಯ ವ್ಯಕ್ತಿ ಆಗಿರುವುದರಿಂದ ಪ್ಲಾನ್ ನ ಮೇಲೆ ಸಹಿ ಮಾಡುವ ಅವಧಿಕಾರ ಅವರಿಗೆ ಇಲ್ಲ ಎಂದರೆ ಸರಿಯಲ್ಲ. ಶಂಭೂಲಿಂಗಪ್ಪರವರು ಕೇಸಿಗೆ ಅನುಕೂಲವಾಗುವಂತೆ ನಿಡಿ 47 ದಾಖಲಾತಿಯನ್ನು ಸೃಷ್ಟಿಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

ನಿಡಿ 48 ರ ದಾಖಲಾತಿ ಶಾಲಾ ಕಾಲೇಜು ಕಟ್ಟಡಕ್ಕೆ ಸಂಬಧಿಸಿದ್ದು ಇರುತ್ತದೆ. ನಿಡಿ 48 ರ ದಾಖಲಾತಿ 2018ಕ್ಕೆ ಸಂಬಧಿಸಿದ್ದು ಇರುತ್ತದೆ. ನಿಡಿ 49 ರಲ್ಲಿ ಉಲ್ಲೇಖವಿರುವ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 50 ರ ಮೇಲೆ ಯಾವ ಕಾನೂನಿನ ಕ್ರಮ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಮತ್ತು ಕ್ರಮ ತೆಗೆದುಕೊಂಡ ಬಗ್ಗೆ ದಾಖಲಾತಿಗಳನ್ನು ನಾನು ಹಾಜರುಪಡಿಸಿಲ್ಲ. ಶಂಭುಲಿಂಗಪ್ಪರವರೇ ಮೀಟರ್ ಬೋರ್ಡ್ ಮತ್ತು ಐಸಿ ಸೆಟ್ ಗಳನ್ನು ತೆಗೆದುಕೊಂಡು ಹೋಗಿ ಸುಳ್ಳು ದೂರುಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಸವರಾಜಯ್ಯರವರೇ ಅದನ್ನು ಬಿಚ್ಚಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

ನಿಡಿ 53 ಆದ ನಂತರ ಇನ್ನೊಂದು ಖಾಸಗಿ ದೂರನ್ನು ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ನನ್ನ ಗಂಡ ಮತ್ತು 2ನೇ ಪ್ರತಿವಾದಿ ಸೇರಿ ಪೊಲೀಸರೊಂದಿಗೆ ಷರೀಕ್ಕಾಗಿ ನಿಡಿ 53ರ ಮೇಲೆ ಸುಳ್ಳು ಬಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ 59 ರ ಕಾರ್ಯಕಾರಿಣಿ ಸಮಿತಿಯ ಅವಧಿ 2024 ರಿಂದ 2025ರವರೆಗೆ ಇದ್ದು ದಿನಾಂಕಗಳು ಗೊತ್ತಿಲ್ಲ. ಬಸವರಾಜಯ್ಯರವರು ನನ್ನ ಗಂಡ ಸ್ನೇಹಿತರು. ಹೆಚ್ ಬಿ ಜಯಪ್ರಕಾಶ್ ನನ್ನ ತಮ್ಮ. ಹೆಚ್.ಎಸ್ ಪುಟ್ಟಸೋಮಪ್ಪರವರು ನನ್ನ ಗಂಡ ಸ್ನೇಹಿತರು. ಬಿ ಪಿ ಶಿವಕುಮಾರ್ ನನ್ನ ಗಂಡ ಸ್ನೇಹಿತರು. ಕೆ ಆರ್ ಪ್ರಕಾಶ್ ನನ್ನ ಗಂಡ ಸ್ನೇಹಿತರು. ಶಂಶಾಕ್ ಎನ್ ಎಸ್ ನನ್ನ ಮಗ. ದೀಕ್ಷಾ ಶ್ರೀಧರ್ ಕುಮಾರ್ ನನ್ನ ಅಳಿಯ. ಕಿರಣ್ ಬಿ.ಜೆ. ನನ್ನ ತಮ್ಮನ ಮಗ. ನೀವು ಹಾಜರುಪಡಿಸಿದ ಪೋಟೋಗಳನ್ನು ಯಾವ ವರ್ಷದಲ್ಲಿ ತೆಗಸಿರುತ್ತೀರಿ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಬೇಕಾದಾಗ ತೆಗೆಸಿರುತ್ತೇವೆ, ವರ್ಷಗಳು ನನಗೆ ಹೇಳಲು ಬರುವುದಿಲ್ಲ. ಆ ಪೋಟೋಗಳು ಒಂದೆ ದಿನ ತೆಗೆದ ಪೊಟೋಗಳಲ್ಲ, ಬೇರೆ ಬೇರೆ ದಿನಾಂಕಗಳಂದು ತೆಗೆದ ಪೊಟೋಗಳು ಇರುತ್ತವೆ. ಪೊಟೋಗಳನ್ನು ಹಳ್ಳಿಮೈಸೂರಿನ ಪೊಟೋಗ್ರಾಫರ್ ಕಡೆಯಿಂದ ತೆಗೆಸಿರುತ್ತೇನೆ. ಪೊಟೋಗ್ರಾಫರ್ ಹೆಸರು ಏನು ಎಂದರೆ ಸಾಕ್ಷಿ ಹಳ್ಳಿಮೈಸೂರಿನಲ್ಲಿ 3-4 ಜನ ಪೊಟೋಗ್ರಾಫರ್ ಇರುತ್ತಾರೆ, ಅವರಿಂದ ಪೊಟೋಗಳನ್ನು ತೆಗಸಿರುತ್ತೇನೆ, ಅವರ ಹೆಸರು ನನಗೆ ಹೇಳಲು ಬರುವುದಿಲ್ಲ, ಅದರೆ ದಾಖಲಾತಿಗಳನ್ನು ಹಾಜರುಡಿಪಡಿಸಿರುತ್ತೇನೆ. ಆ ದಿನ ತುರ್ತಾಗಿ ಸಿಕ್ಕ ಗ್ರಾಫರ್ ಕಡೆಯಿಂದ ಪೊಟೋ ತೆಗೆಸಿರುತ್ತೆನೆ. ಪೋಟೋಗಳನ್ನು ಭಾರತ್ ಎಜುಕೇಶನ್ ಸೊಸೈಟಿಯಲ್ಲಿ ತೆಗೆದಿಲ್ಲ, ಅವುಗಳನ್ನು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.